ವಾವಿಸಂ:763

# ಅ.ಭಾ.84 ನೇ ಕನ್ನಡ ಸಾಹಿತ್ಯ ಸಮ್ಮೇಳನ
# ವಿವಿಧ ಪ್ರವಾಸಿ ತಾಣಗಳಿಗೆ ಪ್ರವಾಸ ಸೌಲಭ್ಯ

**ಧಾರವಾಡ ( ಕರ್ನಾಟಕ ವಾರ್ತೆ) ಡಿ.29:** ಬರುವ ಜನವರಿ 4, 5 ಮತ್ತು 6 ರಂದು 3 ದಿನಗಳ ಕಾಲ ಜರುಗುವ 84ನೇ ಅಖಿಲ ಭಾರತ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿನಿಧಿಗಳು ಮತ್ತು ಸಾರ್ವಜನಿಕರಿಗೆ ಜಿಲ್ಲಾಡಳಿತ ಹಾಗೂ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಹಯೋಗದಲ್ಲಿ ಸಮ್ಮೇಳನ ನೆಡೆಯವ 3 ದಿನಗಳ ಕಾಲ ಪ್ರವಾಸ ಸೌಕರ್ಯಕ್ಕಾಗಿ ಪ್ಯಾಕೇಜ ಘೋಷಿಸಲಾಗಿದೆ.

ಧಾರವಾಡ–ನವಿಲುತೀರ್ಥ–ಗೋಕಾಕಫಾಲ್ಸ್–ಹಿಡಕಲ್ ಡ್ಯಾಮ್–ಧಾರವಾಡ ಮಾರ್ಗದ ಪ್ಯಾಕೇಜಿಗೆ ವಯಸ್ಕರರಿಗೆ ರೂ.300, ಮಕ್ಕಳಿಗೆ ರೂ.150 ನಿಗದಿಪಡಿಸಲಾಗಿದೆ. ಧಾರವಾಡ–ದಾಂಡೇಲಿ–ಮೌಳಂಗಿ–ಕೂಳಗಿ ನೇಚರ್ ಪಾರ್ಕ–ಉಳವಿ–ಸೂಪಾಡ್ಯಾಮ್–ಧಾರವಾಡ ಮಾರ್ಗದ ಪ್ಯಾಕೇಜಿಗೆ ವಯಸ್ಕರರಿಗೆ ರೂ.300, ಮಕ್ಕಳಿಗೆ ರೂ.150 ನಿಗದಿಪಡಿಸಲಾಗಿದೆ. ಧಾರವಾಡ–ಆಲಮಟ್ಟಿ ಡ್ಯಾಮ್–ಕೂಡಲಸಂಗಮ–ಧಾರವಾಡ. ವಯಸ್ಕರರಿಗೆ ರೂ.440, ಮಕ್ಕಳಿಗೆ ರೂ.220 ನಿಗದಿಪಡಿಸಲಾಗಿದೆ. ಧಾರವಾಡ–ಬಾದಾಮಿ–ಐಹೊಳೆ–ಪಟ್ಟದಕಲ್ಲು–ಬಾದಾಮಿ–ಬನಶಂಕರಿ–ಧಾರವಾಡ ಮಾರ್ಗದ ಪ್ಯಾಕೇಜಿಗೆ ವಯಸ್ಕರರಿಗೆ ರೂ.360, ಮಕ್ಕಳಿಗೆ ರೂ.180 ನಿಗದಿಪಡಿಸಲಾಗಿದೆ ಇದರ ಪ್ರಯೋಜನವನ್ನು ರಾಜ್ಯದ ಜನತೆ ಪಡೆದುಕೊಳ್ಳಬೇಕು ಎಂದು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಹಾಗೂ ಸಮ್ಮೇಳನದ ಪ್ರಚಾರ ಸಮಿತಿ ಕಾರ್ಯದರ್ಶಿ ಮಲ್ಲಿಕಾರ್ಜುನ ಭಜಂತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

********